# ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ಏಪ್ರಿಲ್ 14, 1891 ಸಮಾನತೆಯ ಸಮಾಜ ನಿರ್ಮಾಣಕ್ಕಾಗಿ ಬದುಕನ್ನೇ ಮುಡಿಪಾಗಿಟ್ಟ ಮಹಾನ್ ಚೇತನ ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಜನಿಸಿದ ದಿನ. ಭಾರತ ರತ್ನ ಡಾ. ಬಿ.ಆರ್. ಅಂಬೇಡ್ಕರ್ ಅವರು ಜನಿಸಿ 125 ವರ್ಷಗಳು ಪೂರ್ಣಗೊಂಡ ಹಿನ್ನೆಲೆಯಲ್ಲಿ ಕರ್ನಾಟಕ ಸರ್ಕಾರವು ಏಪ್ರಿಲ್ 14, 2016 ರಿಂದ ಒಂದು ವರ್ಷ ಕಾಲ ಅಂಬೇಡ್ಕರ್ ಅವರ 125ನೇ ಜನ್ಮ ವರ್ಷಾಚರಣೆ ಆಯೋಜಿಸಿದೆ.

**ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಈ ವರ್ಷಾಚರಣೆ ಸಂದರ್ಭದಲ್ಲಿ 'ಭಾರತ ಭಾಗ್ಯ ವಿಧಾತ' ಎಂಬ ವಿಶಿಷ್ಟ ಧ್ವನಿ-ಬೆಳಕು; ದೃಶ್ಯ ವೈಭವಗಳ ರೂಪಕವನ್ನು ಸಿದ್ಧಪಡಿಸಿದೆ. ಭಾರತದ ಶೋಷಿತ ಮತ್ತು ತಳಸಮುದಾಯಗಳ ಆತ್ಮಸ್ಥೈರ್ಯವನ್ನು ನೂರ್ಮಡಿಗೊಳಿಸಿ ನೊಂದವರ ಬಾಳಿನಲ್ಲಿ ಬೆಳಕಾಗಿ ಚಿರಸ್ಮರಣೀಯ ಸಾಧನೆಗೈದ ಮಹಾನ್ ವ್ಯಕ್ತಿಯ ಯಶೋಗಾಥೆ ಈ ರೂಪಕ.**

ಡಾ. ಬಿ.ಆರ್. ಅಂಬೇಡ್ಕರ್ ಅವರು ಭಾರತದ ಶೋಷಿತ ಸಮುದಾಯದ ಸ್ಫೂರ್ತಿಯ ಸೆಲೆ ಮತ್ತು ಚೈತನ್ಯ ಶಕ್ತಿ, ನೊಂದವರ ಎದೆಯಾಳದ ಆತ್ಮಸ್ಥೈರ್ಯದ ಹಾಡು, ಭಾರತ ಸಂವಿಧಾನದ ಮಹಾನ್ ಶಿಲ್ಪಿ.

**'ಭಾರತ ಭಾಗ್ಯ ವಿಧಾತ' ದೃಶ್ಯ ವೈಭವದ ಈ ಧ್ವನಿ-ಬೆಳಕು ಕಾರ್ಯಕ್ರಮವನ್ನು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಆಯೋಜಿಸಲಾಗಿದೆ.**



**ಶ್ರೀ ಸಿದ್ದರಾಮಯ್ಯ**
ಸನ್ಮಾನ್ಯ ಮುಖ್ಯಮಂತ್ರಿಗಳು

| ರಂಗ ವಿನ್ಯಾಸ | ನೃತ್ಯ ಸಂಯೋಜನೆ | ಬೆಳಕು | ವಸ್ತ್ರಾಲಂಕಾರ | ಪ್ರಸಾಧನ | ಸಹ ನಿರ್ದೇಶನ |
| --- | --- | --- | --- | --- | --- |
| ಶಶಿಧರ ಅಡಪ | ಪದ್ಮನಿ ಅಚ್ಚಿ | ನಂದಕಿಶೋರ್ | ಪ್ರಮೋದ್ ಶಿಗ್ಗಾವ್ | ರಾಮಕೃಷ್ಣ ಬೆಳ್ತೂರು | ಎಂ.ಪಿ.ಎಂ. ವೀರೇಶ್ |